**ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಎಂವಿಸಿ ಸಂಖ್ಯೆಃ 118/2019**

RW-1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 26.03.2021**

**ಮುಖ್ಯವಿಚಾರಣೆ 1 ನೇ ಎದುರುದಾರರ ಪರ ಶ್ರೀ ಬಿ.ಎಸ್.ಆರ್, ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ಓದಿಸಿ ತಿಳಿದುಕೊಂಡಿದ್ದು, ಆ ವಿಷಯ ಸರಿ ಹಾಗೂ ಸತ್ಯವಾಗಿರುತ್ತವೆ ಅಂತ ಒಪ್ಪಿ ಮನವರಿಕೆ ಮಾಡಿಕೊಂಡು ಪ್ರಮಾಣಪತ್ರಕ್ಕೆ ನನ್ನ ಸಹಿ ಮಾಡಿರುತ್ತೇನೆ.

**ವಕೀಲರು ಮುಂದಿನ ಮುಖ್ಯವಿಚಾರಣೆ ಕಾಲಾವಕಾಶ ಕೇಳಲಾಗಿ, ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ

ದಿನಾಂಕಃ 17.04.2021

**(ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಂದುವರೆದ ಮುಖ್ಯವಿಚಾರಣೆ 1 ನೇ ಎದುರುದಾರರ ಪರ ಶ್ರೀ ಬಿ.ಎಸ್.ಆರ್, ವಕೀಲರಿಂದಃ**

2. ಈ ಪ್ರಕರಣದಲ್ಲಿ ನಾನು ನೋಟರಿಕೃತ ನೊಂದಣಿ ಪ್ರಮಾಣಪತ್ರ ಹಾಗೂ ಚಾಲನಾ ಪರವಾನಗಿ ಇವುಗಳನ್ನು ಮೂಲದಾಖಲೆಗಳೊಂದಿಗೆ ಹಾಜರುಪಡಿಸಿದ್ದು, ನೋಟರಿಕೃತ ಪ್ರತಿಗಳನ್ನು ಮೂಲ ದಾಖಲೆಗಳೊಂದಿಗೆ ಹೋಲಿಸಿ ನೋಡಿ, ನೋಟರಿಕೃತ ಪ್ರತಿಗಳನ್ನು **ನಿಆರ್-1** ಹಾಗೂ **2** ಎಂದು ಗುರುತಿಸಲಾಯಿತು. (ಮೂಲ ದಾಖಲೆಗಳನ್ನು ಸಾಕ್ಷಿಗೆ

ವಾಪಸ್ಸು ನೀಡಲಾಗಿದೆ). ನಾನು ನೋಟರಿಕೃತ ವಿಮಾ ಪಾಲಿಸಿಯ ಪ್ರತಿಯನ್ನು ಹಾಜರುಪಡಿಸಿದ್ದೇನೆ.

**<u>ಪಾಟೀಸವಾಲು ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್, ವಕೀಲರಿಂದಃ</u>**

3. ಚಾಲಕ ಮಂಜುನಾಥ ನನಗೆ ತಮ್ಮನಾಗಬೇಕು. ನಾನು ಅಪಘಾತವನ್ನು ನೋಡಿಲ್ಲ. ಅಪಘಾತದ ಬಗ್ಗೆ ನನ್ನ ತಮ್ಮ ಮಾಹಿತಿ ನೀಡಿರುತ್ತಾನೆ ಎಂದರೆ ನಿಜ. ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ತಮ್ಮನ ವಿರುದ್ಧ ದೂರು ದಾಖಲಾಗಿದೆ ಎಂದರೆ ನಿಜ. ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ತಮ್ಮನ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಸಾಮಾನ್ಯವಾಗಿ ಕ್ಲೀನರಿಗೆ ದಿನಕ್ಕೆ 400 ರೂ ಸಂಬಳವಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿನಕ್ಕೆ ರೂ.150 ರಿಂದ 200/- ಸಂಬಳವಿರುತ್ತದೆಂದು ನುಡಿಯುತ್ತಾರೆ.

**<u>ಪಾಟೀಸವಾಲು 2 ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ, ವಕೀಲರಿಂದಃ</u>**

4. ಜೀತೊ ವಾಹನವನ್ನು ಖರೀದಿಸಿ 2 ½ ವರ್ಷಗಳಾಗಿವೆ. ಅದು ಸರಕು ಸಾಗಾಣಿಕೆ ಮಾಡುವ ವಾಹನ ಎಂದರೆ ನಿಜ. ಸದರಿ ವಾಹನದಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗಬಾರದು ಎಂದರೆ ನಿಜ. ಅಪಘಾತದ ದಿನದಂದು ಸದರಿ ವಾಹನದಲ್ಲಿ ನನ್ನ ತಮ್ಮ ಹಾಗೂ ಮೃತ ರಾಜೇಶ ಹೊರಟಿದ್ದರು. ಸದರಿ ವಾಹನದ ಪರವಾನಗಿ ಇದ್ದ ಬಗ್ಗೆ ಗೊತ್ತಿಲ್ಲ. ಸದರಿ ವಾಹನದ ಎಫ್.ಸಿ ಇತ್ತು. ಎಫ್.ಸಿಯ ಪ್ರತಿಯನ್ನು ಹಾಜರುಪಡಿಸಿಲ್ಲ. ಸದರಿ ವಾಹನವು ಹುಣಸೂರು ಕಛೇರಿಯಲ್ಲಿ ನೊಂದಣಿಯಾಗಿತ್ತು. ಸದರಿ ವಾಹನಕ್ಕೆ ಪರವಾನಗಿ ಹಾಗೂ ಎಫ್. ಸಿ ಇರಲಿಲ್ಲ ಎಂದರೆ ಸುಳ್ಳು. ಅಪಘಾತವಾದ ಸಂದರ್ಭದಲ್ಲಿ ನನ್ನ ಚಾಲನಾ ಪರವಾನಗಿ ಇರಲಿಲ್ಲ, ಆದರೆ ಈಗ ಇದೆ. ಆ ದಿನದಂದು ಸದರಿ ವಾಹನದಲ್ಲಿ ಗೆಣಸು ಹಾಗೂ ಕೆಸುವಿನ ಗೆಡ್ಡೆಯನ್ನು ಸಿದ್ಧಾಪುರದಿಂದ ನಮಗೆ ತರುತ್ತಿದ್ದರು. ಆರ್.ಸಿ ಪ್ರಕಾರ ಸದರಿ ವಾಹನಕ್ಕೆ ಕ್ಲೀನರ್ ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ಆ ದಿನ ವಾಹನವನ್ನು ನಾನೇ ನಡೆಸುತ್ತಿದ್ದು, ನನ್ನ ತಪ್ಪಿನಿಂದ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ಆಗ ನನ್ನ ಚಾಲನ ಪರವಾನಗಿ ಇಲ್ಲದ ಕಾರಣ ಮಂಜುನಾಥ ವಾಹನವನ್ನು ನಡೆಸುತ್ತಿದ್ದನೆಂದು ಪರಿಹಾರ ಕೊಡುವುದನ್ನು ತಪ್ಪಿಸಲು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೃತ ರಾಜೇಶ ಈತನು ಕ್ಲೀನರ್ ಆಗಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ಆತನಿಗೆ ಯಾವುದೇ ಸಂಬಳ ನೀಡುತ್ತಿರಲಿಲ್ಲ ಎಂದರೆ ಸುಳ್ಳು. ಆ ದಿನ ಕೂಲಿ ಕಾರ್ಮಿಕರನ್ನು ಸದರಿ ವಾಹನದಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ ಮೃತ ರಾಜೇಶ ಈತನು ಪುಕ್ಕಟ್ಟೆಯಾಗಿ

ವಾಹನದಲ್ಲಿ ಪ್ರಯಾಣಿಸುತ್ತಿದ್ದ ಎಂದರೆ ಸರಿಯಲ್ಲ. ಪ್ರಯಾಣಿಕರನ್ನು ಸದರಿ ವಾಹನದಲ್ಲಿ ಸಾಗಿಸಿ ನಿಯಮಗಳನ್ನು ಉಲ್ಲಂಘನೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನೇ ಪರಿಹಾರ ನೀಡಲು ಭಾದ್ಯಸ್ಥನಿದ್ದು, 2ನೇ ಎದುರುದಾರರು ಭಾದ್ಯಸ್ಥರಲ್ಲ ಎಂದರೆ ಸುಳ್ಳು. ನನ್ನ ಜವಾಬ್ದಾರಿ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ